ಸ್ಥಾಪನೆ : 1964

# ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560 019.

ದೂರವಾಣಿ :080-22958156/57, ಇ-ಮೇಲ್: admin.ao@stc.bank.in ವೆಬ್‌ಸೈಟ್:www.stc.bank.in

## “2025-26ನೇ ಸಾಲಿನ 61ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ”

**ದಿನಾಂಕ : 09-08-2026 ಭಾನುವಾರ ಬೆಳಿಗ್ಗೆ 10-00 ಗಂಟೆಗೆ**

ಸ್ಥಳ

**“ನರ್ಮದಾಬಾಯಿ ಆಡಿಟೋರಿಯಂ, ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್”,**

**ಎನ್.ಆರ್. ಕಾಲೋನಿ, ಬೆಂಗಳೂರು-560 019.**

# SREE THYAGARAJA CO-OPERATIVE BANK LTD.,

AO:No.5, 9th Cross, N.R. Colony, Bengaluru - 560 019.

## 61st Annual General Body Meeting Notice 2025-26

**ಸೂಚನೆಗಳು :-**

1. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರುಗಳು ಆಡಿಟ್ಟಾದ ಲೆಕ್ಕಪತ್ರಗಳ ವಿಷಯಗಳಿಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಲು ಅವಕಾಶವಿರುತ್ತದೆಯೇ ಹೊರತು ವಿಷಯೇತರ ಚರ್ಚೆಗೆ ಅವಕಾಶವಿರುವುದಿಲ್ಲ. ಸದಸ್ಯರುಗಳು ಮಾತನಾಡಲು 05 ನಿಮಿಷ ಕಾಲಾವಕಾಶವಿರುತ್ತದೆ.
2. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ಇತರೆ ವಿಷಯಗಳೇನಾದರೂ ಇದ್ದಲ್ಲಿ ಸರ್ವಸದಸ್ಯರ ಸಭೆಯ ದಿನಾಂಕಕ್ಕೆ 5 ದಿವಸ ಮುಂಚಿತವಾಗಿ ಇ-ಮೇಲ್ ಮೂಲಕ ಬ್ಯಾಂಕಿನ ceo@stc.bank.in ಗೆ ಅಥವಾ ಲಿಖಿತವಾಗಿ ಅಧ್ಯಕ್ಷರು/ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಕಳುಹಿಸಬೇಕು.ತದನಂತರ, ಬಂದು ಮನವಿ ನೀಡಿದವರಿಗೆ  ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.
3. ವಾರ್ಷಿಕ ಸರ್ವಸದಸ್ಯರ ಸಭಾ ಪ್ರವೇಶಕ್ಕೆ ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

# ಮಾನ್ಯ ಸದಸ್ಯರುಗಳ ಗಮನಕ್ಕೆ ವಿಶೇಷ ಮಾಹಿತಿ

**ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(ಎ) ಹಾಗೂ ಬ್ಯಾಂಕಿನ ಉಪನಿಯಮದ ಪ್ರಕಾರ ಬ್ಯಾಂಕಿನ ಸದಸ್ಯರು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು ಹಾಗೂ ವ್ಯವಸ್ಥಾಪನೆಯಲ್ಲಿ ಸದಸ್ಯರು ಭಾಗವಹಿಸುವ ಬಗ್ಗೆ ತಿಳುವಳಿಕೆ.**

1) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ರೂ.1000/– (ಒಂದು ಸಾವಿರ ರೂಪಾಯಿಗಳು)

2) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಒಂದು ಸಾವಿರ ರೂಪಾಯಿಗಳು ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ, ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನಿಗೆ ಮಂಜೂರಾದ ಮೊತ್ತ.

3) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ನಗದು ಅಥವಾ ಹೊಂದಾಣಿಕೆ ಅಥವಾ ಚೆಕ್ಕು ತೀರುವಳಿ ಮೂಲಕ ವರ್ಷದಲ್ಲಿ ನಡೆಸಬೇಕಾದ ಕನಿಷ್ಟ ಬ್ಯಾಂಕಿಂಗ್ ವ್ಯವಹಾರ ಸಂಖ್ಯೆಯು 5(ಐದು) ಇರತಕ್ಕದ್ದು, (ಜಮಾ ಅಥವಾ ಖರ್ಚು ಸೇರಿ)

4) ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಎರಡು ವಾರ್ಷಿಕ ಸಭೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕಾಗಿದೆ. ಆದ್ದರಿಂದ ಮಾನ್ಯ ಸದಸ್ಯರುಗಳು ಕಡ್ಡಾಯವಾಗಿ ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ಕೋರಲಾಗಿದೆ.

5) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಂಘವು ದೊರಕಿಸಿಕೊಡುವಂಥ ಮೇಲ್ಕಂಡ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳುವ ಮೂಲಕ ಸಂಘದ ವ್ಯವಸ್ಥಾಪನೆಯಲ್ಲಿ ಭಾಗವಹಿಸತಕ್ಕದ್ದು:

6) ಕನಿಷ್ಟ ಸೇವೆಗಳನ್ನು ಬಳಸಿಕೊಳ್ಳಲು ತಪ್ಪಿದರೆ ಅಥವಾ ಕನಿಷ್ಟ ಸಂಖ್ಯೆಯ ವಾರ್ಷಿಕ ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪಿದರೆ ಅಂತಹ ಸದಸ್ಯರು ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಸಹಿ/–

**ಮುಖ್ಯಕಾರ್ಯನಿರ್ವಹಣಾಧಿಕಾರಿ**

## ಪ್ರತಿಭಾ ಪುರಸ್ಕಾರ

ಎಸ್.ಎಸ್.ಎಲ್.ಸಿ ಯಲ್ಲಿ ಶೇ 90 ರ ಮೇಲ್ಪಟ್ಟು , ದ್ವಿತೀಯ ಪಿ.ಯು.ಸಿಯಲ್ಲಿ ಶೇ 80 ರ ಮೇಲ್ಪಟ್ಟು ಮತ್ತು ಪದವಿ/ಬಿಇ/ಡಿಪ್ಲೊಮೊ ಪರೀಕ್ಷೆಗಳಲ್ಲಿ ಶೇ 70 ರ ಮೇಲ್ಪಟ್ಟು ಮತ್ತು ವೈದ್ಯಕೀಯ /ಸ್ನಾತಕೋತ್ತರ ಪದವಿಗಳಲ್ಲಿ 2025–2026ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಸದಸ್ಯರುಗಳ ಮಕ್ಕಳಿಗೆ **ದಿನಾಂಕ: 08–08–2026 ರಂದು ಶನಿವಾರ ಸಂಜೆ 5.00 ಗಂಟೆಗೆ ನರ್ಮದಾಬಾಯಿ ಆಡಿಟೋರಿಯಂ, ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್, ಎನ್ ಆರ್ ಕಾಲೋನಿ, ಬೆಂಗಳೂರು–560 019**. ಇಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆದ್ದರಿಂದ ಬ್ಯಾಂಕಿನ ಸದಸ್ಯರುಗಳು ತಮ್ಮ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಅರ್ಜಿಯೊಂದಿಗೆ ಆಡಳಿತ ಕಛೇರಿ ಅಥವಾ ಹತ್ತಿರದ ಶಾಖೆಗಳಿಗೆ ದಿನಾಂಕ: 05–08–2026 ರೊಳಗಾಗಿ ಸಲ್ಲಿಸತಕ್ಕದ್ದು. ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಸಲ್ಲಿಸುವ ಸದಸ್ಯರುಗಳ ಮಕ್ಕಳು ಒಂದು ವೇಳೆ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿಲ್ಲದೆ ಇದ್ದ ಪಕ್ಷದಲ್ಲಿ ಹತ್ತಿರವಿರುವ ಶಾಖೆಗೆ ಭೇಟಿ ನೀಡಿ ಉಳಿತಾಯ ಖಾತೆಯನ್ನು ಕಡ್ಡಾಯವಾಗಿ ಪ್ರಾರಂಭಿಸುವಂತೆ ಹಾಗೂ ಅರ್ಹ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಆಗಮಿಸಿ ಪುರಸ್ಕಾರ ಸ್ವೀಕರಿಸಬೇಕೆಂದು ಕೋರಲಾಗಿದೆ.

# ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560 019.**

## "61ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ"

ಮಾನ್ಯರೇ,

**2025-26ನೇ ಸಾಲಿನ ಬ್ಯಾಂಕಿನ 61ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ:09-08-2026ರಂದು ಭಾನುವಾರ ಬೆಳಿಗ್ಗೆ 10-00 ಗಂಟೆಗೆ ಸರಿಯಾಗಿ ನರ್ಮದಾಬಾಯಿ ಆಡಿಟೋರಿಯಂ, ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್, ಎನ್.ಆರ್. ಕಾಲೋನಿ, ಬೆಂಗಳೂರು-560 019**. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಆರ್. ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳುವ ಸಲುವಾಗಿ ಸಭೆಯನ್ನು ಕರೆಯಲಾಗಿದೆ. ಆದ್ದರಿಂದ, ಮಾನ್ಯ ಸದಸ್ಯರುಗಳು ಸಭೆಗೆ ಸಕಾಲಕ್ಕೆ ಆಗಮಿಸಿ ಸಕ್ರಿಯವಾಗಿ ಭಾಗವಹಿಸಲು ವಿನಂತಿಸಿದೆ.

### ವಿಷಯಗಳು

1. ಪ್ರಾರ್ಥನೆ
2. ಸ್ವಾಗತ ಭಾಷಣ
3. 2025-26ನೇ ಸಾಲಿನ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
4. ವರದಿ ಸಾಲಿನಲ್ಲಿ ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು.
5. ಅಧ್ಯಕ್ಷರಿಂದ ಪ್ರಾಸ್ತಾವಿಕ ನುಡಿ.
6. 2024-25ನೇ ಸಾಲಿನ ಸರ್ವಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.
7. 2025-26ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು ಮತ್ತು 2026-27ನೇ ಸಾಲಿನ ಕಾರ್ಯಯೋಜನೆಗೆ ಅನುಮೋದನೆ ನೀಡುವುದು.
8. 2025-26ನೇ ಸಾಲಿನ ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಮತ್ತು ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.
9. 2025-26ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.
10. 2025-26ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಖರ್ಚಾಗಿರುವುದಕ್ಕೆ ಅನುಮೋದನೆ ನೀಡುವುದು, 2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು 2027-28ನೇ ಸಾಲಿನ ಆಯವ್ಯಯ (ತಾತ್ಕಾಲಿಕ) ಅಂದಾಜುಗಳನ್ನು ಅನುಮೋದಿಸುವುದು.
11. 2026-27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ಮರು ನೇಮಕಾತಿಗಾಗಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಅನುಮತಿಗಾಗಿ ಪತ್ರ ಕಳುಹಿಸಿರುವುದನ್ನು ಸ್ಥಿರೀಕರಿಸುವ ವಿಚಾರ.
12. ಬ್ಯಾಂಕಿನ ಉಪನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿದಂತೆ ಮೀಸಲು ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ವಿಮರ್ಶೆ.
13. 2025-26ನೇ ಸಾಲಿನಲ್ಲಿ ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಹಾಗೂ ತೆಗೆದು ಹಾಕಿದ ಸದಸ್ಯರ ಪಟ್ಟಿಯ ಪರಿಶೀಲನೆ.
14. ಬ್ಯಾಂಕಿನ ಸದಸ್ಯರು ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ವಿಮರ್ಶೆ.
15. ಬ್ಯಾಂಕಿನ ಉಪನಿಬಂಧನೆಗಳಿಗೆ (ಬೈಲಾ) ತಂದಿರುವ ತಿದ್ದುಪಡಿಗಳನ್ನು ಪರಿಶೀಲಿಸಿ ಅಂಗೀಕರಿಸುವುದು.
16. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.
17. ಅಧ್ಯಕ್ಷರ ಭಾಷಣ
18. ವಂದನಾರ್ಪಣೆ

ಸಹಿ/-

ಸ್ಥಳ: ಬೆಂಗಳೂರು **(ಎಸ್.ಶ್ರೀರಾಮ್)**

ದಿನಾಂಕ:15-07-2026 ಮುಖ್ಯಕಾರ್ಯನಿರ್ವಹಣಾಧಿಕಾರಿ

## "ಸದಸ್ಯರುಗಳ ಗಮನಕ್ಕಾಗಿ"

2025-26ನೇ ಸಾಲಿನ ನಿರ್ದೇಶಕ ಮಂಡಳಿ ವರದಿ ಹಾಗೂ ಆಡಿಟ್ಟಾದ ಲೆಕ್ಕಪತ್ರಗಳನ್ನು ದಿನಾಂಕ:03-08-2026ರಿಂದ ಬ್ಯಾಂಕಿನ ಆಡಳಿತ ಕಛೇರಿ ಹಾಗೂ ಎಲ್ಲಾ ಶಾಖೆಗಳಲ್ಲಿ ನೀಡಲಾಗುವುದು. ಮಾನ್ಯ ಸದಸ್ಯರುಗಳು ಗುರುತಿನ ಚೀಟಿಯನ್ನು ಹಾಜರುಪಡಿಸಿ ವರದಿ ಪುಸ್ತಕವನ್ನು ಪಡೆಯಬಹುದಾಗಿದೆ ಹಾಗೂ ಮೇಲಿನ ವಿಷಯಗಳ ಸಂಕ್ಷಿಪ್ತ ಟಿಪ್ಪಣಿಗಳನ್ನು ಮುಂದಿನ ಪುಟಗಳಲ್ಲಿ ಪ್ರಕಟಿಸಿದೆ.

# –: ಸೂಚನೆಗಳು :–

1. ಬ್ಯಾಂಕಿನ ಉಪನಿಯಮ ಸಂಖ್ಯೆ :24.1 ರ ಪ್ರಕಾರ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಲು ಗುರುತಿನ ಚೀಟಿಯು ಕಡ್ಡಾಯವಾಗಿರುವುದರಿಂದ ಮಾನ್ಯ ಸದಸ್ಯರು ಬ್ಯಾಂಕ್ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ. ಇದುವರೆಗೆ ಷೇರು ಸರ್ಟಿಫಿಕೇಟ್ ಹಾಗೂ ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರು ಕೂಡಲೇ ತಮ್ಮ ಇತ್ತೀಚಿನ ಎರಡು (2) ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಸಲ್ಲಿಸಿ, ಗುರುತಿನ ಚೀಟಿಯನ್ನು ಪಡೆಯಬೇಕಾಗಿ ವಿನಂತಿ.

2. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ಬ್ಯಾಂಕಿನ ಕನಿಷ್ಟ ಸೌಲಭ್ಯ ಉಪಯೋಗಿಸುವ ಮತ್ತು ಕಳೆದ 5 (ಐದು) ಸರ್ವಸದಸ್ಯರ ಸಭೆಯ ಪೈಕಿ 2 (ಎರಡು) ಸರ್ವಸದಸ್ಯರ ಸಭೆಗಳಲ್ಲಿ ಭಾಗವಹಿಸುವ ಸದಸ್ಯರುಗಳು ಮಾತ್ರ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಲು ಮತ ಚಲಾಯಿಸಲು ಅರ್ಹರಾಗುವುದರಿಂದ ಎಲ್ಲಾ ಸದಸ್ಯರುಗಳು ಅನುಮೋದಿತ ಬ್ಯಾಂಕಿನ ಬೈಲಾ ಸಂಖ್ಯೆ:20.1 ರ ಪ್ರಕಾರ ಪ್ರತಿ ವರ್ಷ ಕನಿಷ್ಟ ಸೌಲಭ್ಯವನ್ನು ಪಡೆದು ವ್ಯವಹರಿಸಲು ಕೋರಿದೆ.

3. ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 20(2) (ಎiii) ಮತ್ತು ಬ್ಯಾಂಕಿನ ಉಪನಿಯಮ ಸಂಖ್ಯೆ 44.5ರ ಪ್ರಕಾರ ದಿನಾಂಕ:08–08–2025 ರ ನಂತರ ಬ್ಯಾಂಕಿನಿಂದ ಸದಸ್ಯತ್ವವನ್ನು ಪಡೆದಿರುವಂತಹ ಸದಸ್ಯರುಗಳು ಬ್ಯಾಂಕಿನ ಸರ್ವಸದಸ್ಯರ ಸಭೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

4. ವಾರ್ಷಿಕ ಸರ್ವಸದಸ್ಯರ ಸಭೆಯ ದಿನದಂದು ಹಾಜರಿ ಪುಸ್ತಕದಲ್ಲಿ ಸಹಿಯನ್ನು ಸದಸ್ಯತ್ವದ ಸಂಖ್ಯೆ ಹಾಗೂ ಮೊಬೈಲ್ ನಂಬರ್‌ನೊಂದಿಗೆ ನಮೂದಿಸಬೇಕಾಗಿ ಮತ್ತು ಸದಸ್ಯರಲ್ಲದವರನ್ನು ಸಭೆಗೆ ಕರೆತರಬಾರದಾಗಿ ಕೋರಿದೆ.

5. ಬ್ಯಾಂಕಿನ ಗುರುತಿನ ಚೀಟಿ ಪಡೆಯದೇ ಇರುವವರು ಬ್ಯಾಂಕಿನ ಆಡಳಿತ ಕಛೇರಿಗೆ ಬಂದು ಸದಸ್ಯತ್ವದ ಪುಸ್ತಕದಲ್ಲಿ ಸಹಿ ಮಾಡಿ ಪಡೆಯತಕ್ಕದ್ದು. ವಾರಸುದಾರರ ಹೆಸರುಗಳನ್ನು ನಮೂದಿಸದೇ/ಬದಲಾವಣೆ ಇರುವಂತಹ ಸದಸ್ಯರುಗಳು ವಾರಸುದಾರರ ಹೆಸರುಗಳನ್ನು ನಮೂದಿಸಲು ವಿನಂತಿಸಲಾಗಿದೆ. ಮಾನ್ಯ ಸದಸ್ಯರುಗಳು ಬ್ಯಾಂಕಿಗೆ ಕೊಟ್ಟಿರುವ ವಿಳಾಸದಲ್ಲಿ ಬದಲಾವಣೆ, ಮೊಬೈಲ್, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸಗಳನ್ನು ಆಡಳಿತ ಕಛೇರಿಯ ಷೇರು ವಿಭಾಗಕ್ಕೆ ಹಾಗೂ ಮೂಲ ಉಳಿತಾಯ ಖಾತೆ ಇರುವ ಶಾಖೆಯಲ್ಲಿ ಲಿಖಿತ ಮೂಲಕ ಕೂಡಲೇ ತಿಳಿಸುವುದು ಹಾಗೂ ಕ್ರಮಬದ್ದಗೊಳಿಸುವುದು.

6. ಕೆಲವು ಸದಸ್ಯರು ಷೇರು ಲಾಭಾಂಶವನ್ನು (ಡಿವಿಡೆಂಡ್) ಕಳೆದ ಮೂರು ವರ್ಷಗಳಿಂದಲೂ ತೆಗೆದುಕೊಂಡಿರುವುದಿಲ್ಲ. ಅಂತಹ ಸದಸ್ಯರು ಷೇರು ಲಾಭಾಂಶವನ್ನು (ಡಿವಿಡೆಂಡ್) ತಕ್ಷಣ ಪಡೆಯುವುದು. ಹಂಚಿಕೆಗೆ ಏರ್ಪಾಡು ಮಾಡಿರುವ ವರ್ಷದಿಂದ 3 ವರ್ಷದ ಒಳಗಾಗಿ ಲಾಭಾಂಶವನ್ನು (ಡಿವಿಡೆಂಡ್) ಪಡೆಯದಿದ್ದಲ್ಲಿ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.

7. ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನ ಸದಸ್ಯರು/ಗ್ರಾಹಕರು ಕೆವೈಸಿ(KYC)ಗೆ ಸಂಬಂಧಪಟ್ಟ ದಾಖಲೆಗಳಾದ ಇತ್ತೀಚಿನ ತಮ್ಮ ಭಾವಚಿತ್ರ, ವಿಳಾಸ ದೃಢೀಕರಣ ಪತ್ರ, ಮಾದರಿ ರುಜು, ದೂರವಾಣಿ ಸಂಖ್ಯೆ, ಪಾನ್ ನಂಬರ್ ಹಾಗೂ ಇ–ಮೇಲ್ ವಿಳಾಸಗಳನ್ನು, ಆಯಾ ಶಾಖೆಗಳಿಗೆ ನೀಡಿ ತಮ್ಮ ಖಾತೆಗಳನ್ನು ಕ್ರಮಬದ್ದಗೊಳಿಸಬೇಕೆಂದು ಕೋರಿದೆ. ಒಂದು ವೇಳೆ ಖಾತೆಯಲ್ಲಿ ವ್ಯವಹರಿಸದೇ ಇದ್ದ ಪಕ್ಷದಲ್ಲಿ, ಖಾತೆಗಳು ಸ್ಥಗಿತಗೊಂಡ 10 ವರ್ಷಕ್ಕೂ ಮೇಲ್ಪಟ್ಟ ಖಾತೆಗಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕಿನ

"Depositor Education and Awareness Fund" ಖಾತೆಗೆ ವರ್ಗಾಯಿಸುವುದು ಕಡ್ಡಾಯವಾಗಿದೆ. ಆದ್ದರಿಂದ, ಸದಸ್ಯರು/ಠೇವಣಿದಾರರು ತಮ್ಮ ಠೇವಣಿ ಖಾತೆಗಳನ್ನು ಸ್ಥಗಿತಗೊಳ್ಳದಂತೆ ವ್ಯವಹರಿಸಲು ಕೋರಲಾಗಿದೆ.

8. ಬ್ಯಾಂಕಿನ ಉಪನಿಯಮ ಸಂಖ್ಯೆ 10ರ ಪ್ರಕಾರ ಪ್ರತಿ ಷೇರಿನ ಮುಖಬೆಲೆಯು ನೂರು ರೂಪಾಯಿಗಳಾಗಿರುತ್ತದೆ ಮತ್ತು ಕನಿಷ್ಠ 10 ಷೇರುಗಳನ್ನಾದರೂ ಹೊಂದಿರಬೇಕಾಗಿರುತ್ತದೆ. ಈ ಉಪನಿಯಮ ರೀತ್ಯಾ ಅಪೂರ್ಣ ಷೇರು ಹೊಂದಿರುವ ಷೇರುದಾರರಿಗೆ ಅಂಚೆ ಮೂಲಕ ಪತ್ರವನ್ನು ಕಳುಹಿಸಿದ್ದು, ಕೆಲವು ಸದಸ್ಯರು ಉಳಿಕೆ ಷೇರು ಮೊತ್ತವನ್ನು ಪಾವತಿಸಿ ಪೂರ್ಣ ಷೇರುದಾರರಾಗಿರುತ್ತಾರೆ. ಒಂದು ವೇಳೆ ಷೇರುದಾರರಿಗೆ ಅಂಚೆ ಪತ್ರ ಸ್ವೀಕೃತಿಯಾಗದೇ ಇದ್ದ ಪಕ್ಷದಲ್ಲಿ ಈ ನೋಟೀಸ್ ತಲುಪಿದ ಕೂಡಲೇ ಸದಸ್ಯರು ಉಳಿಕೆ ಷೇರು ಮೊತ್ತ ಪಾವತಿಸಿ ಪೂರ್ಣ ಷೇರುದಾರರಾಗಬೇಕಾಗಿ ಕೋರಿದೆ.

9. ಬ್ಯಾಂಕು ಇತರೆ ಆದಾಯವನ್ನು ಹೆಚ್ಚಿಸುವ ದೃಷ್ಟಿಯಿಂದ "IRDA" ಸಂಸ್ಥೆಯ ಮೂಲಕ ಕಾರ್ಪೊರೇಟ್ ವಿಮೆ ಏಜೆನ್ಸಿ ಪರವಾನಗಿ ಪಡೆದಿದ್ದು, ಜೀವವಿಮೆ, ಆರೋಗ್ಯವಿಮೆ ಮತ್ತು ಸಾಮಾನ್ಯ ವಿಮೆಗಳನ್ನು ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ನೀಡಲಾಗುತ್ತಿದ್ದು ಇದರ ಪ್ರಯೋಜನವನ್ನು ಸದಸ್ಯರು ಪಡೆದುಕೊಳ್ಳಬೇಕೆಂದು ಕೋರಿದೆ.

10. ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿ ಮಾಡುವುದರಿಂದ ಸುಸ್ತಿ ಬಡ್ಡಿ ಮತ್ತು ಇನ್ನಿತರೆ ವಸೂಲಿ ವೆಚ್ಚಗಳ ಪಾವತಿ ಮಾಡುವುದನ್ನು ತಪ್ಪಿಸಬಹುದಾಗಿದೆ ಹಾಗೂ ಪುನಃ ಸಾಲ ಪಡೆಯಲು ಅನುಕೂಲವಾಗುವುದು.

11. ಸದಸ್ಯರು ತಮ್ಮ ಉಳಿತಾಯ/ಚಾಲ್ತಿ ಖಾತೆಯಲ್ಲಿ ನಡೆದಿರುವ ವ್ಯವಹಾರದ ಬಗ್ಗೆ ಕಿರುಸಂದೇಶ (SMS Alerts) ಪಡೆಯಲು ತಮ್ಮ ಮೊಬೈಲ್ ಸಂಖ್ಯೆಯನ್ನು ಹತ್ತಿರದ ಶಾಖೆಯಲ್ಲಿ ನಮೂದಿಸಬೇಕಾಗಿ ಕೋರಿದೆ.

12. ಆಡಳಿತ ಕಛೇರಿ ಮತ್ತು ಶಾಖೆಗಳಲ್ಲಿ ಕೋರ್‌ಬ್ಯಾಂಕಿಂಗ್ ತಂತ್ರಾಂಶವನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿದೆ. ಆಕ್ಸಿಸ್ ಬ್ಯಾಂಕಿನ ಸಹಯೋಗದೊಂದಿಗೆ "Rupay ATM Card, IMPS ಮತ್ತು UPI ನ್ನು ಈಗಾಗಲೇ ನೀಡಲಾಗುತ್ತಿದೆ. ಮಾನ್ಯ ಸದಸ್ಯರು/ ಗ್ರಾಹಕರುಗಳಿಗೆ ಆಧುನಿಕತೆಗೆ ತಕ್ಕಂತೆ ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕುಗಳಿಗೆ ಸರಿಸಮಾನವಾಗಿ ಎಲ್ಲಾ ರೀತಿಯ ಡಿಜಿಟಲ್ ಹಾಗೂ Net Banking ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದ್ದು ಹಾಗೂ ಬ್ಯಾಂಕಿನ ಗ್ರಾಹಕರುಗಳಿಗೆ/ಸದಸ್ಯರುಗಳಿಗೆ Futuretech Commerce Pvt. Ltd., (Getepay) ಸಂಸ್ಥೆಯ ಮೂಲಕ QR Code Scanner ಸೌಲಭ್ಯವನ್ನು ನೀಡಲಾಗುತ್ತಿದೆ.

13. ಸದಸ್ಯರು ಮರಣ ಹೊಂದಿದ ದಿನಾಂಕದಿಂದ 1 ವರ್ಷದ ಒಳಗಾಗಿ ಅವರ ನಾಮಿನಿಯವರು ಅಥವಾ ಹಕ್ಕುದಾರರು ಮರಣ ಸಮರ್ಥನೆ ಪತ್ರ ಮತ್ತು ಬ್ಯಾಂಕಿನಿಂದ ಪಡೆದುಕೊಂಡಿರುವ ಷೇರು ಪ್ರಮಾಣಪತ್ರ, ಗುರುತಿನ ಚೀಟಿ ಜೊತೆ ಅರ್ಜಿ ಸಲ್ಲಿಸಿ ಮರಣೋತ್ತರ ಸಹಾಯ ನಿಧಿಯ ಮೊಬಲಗನ್ನು ಪಡೆದುಕೊಳ್ಳುವುದು. ಮರಣ ಹೊಂದಿ 1 ವರ್ಷ ಮುಗಿದಿದ್ದರೆ ಅಂತಹವರಿಗೆ ಮರಣೋತ್ತರ ನಿಧಿಯನ್ನು ಸಂದಾಯ ಮಾಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ.

14. ಬ್ಯಾಂಕಿನ ಸರ್ವಸದಸ್ಯರ ಸಭೆಯಲ್ಲಿ ಹಾಜರಾಗುವ ಸದಸ್ಯರುಗಳಿಗೆ ಮಾತ್ರ **ದಿನಾಂಕ:09–08–2026 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 12.30 ಘಂಟೆವರೆಗೆ ನರ್ಮದಾಬಾಯಿ ಆಡಿಟೋರಿಯಂ, ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್, ಎನ್.ಆರ್. ಕಾಲೋನಿ, ಬೆಂಗಳೂರು–560 019**. ಇಲ್ಲಿ ಉಪಹಾರ ಭತ್ಯೆಯಾಗಿ **ರೂ.250/–** ಗಳನ್ನು ನಗದಾಗಿ ನೀಡಲಾಗುವುದು. ಮಾನ್ಯ ಸದಸ್ಯರುಗಳು ಸಹಕರಿಸಬೇಕಾಗಿ ಕೋರಲಾಗಿದೆ.

# ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560019

## 2025-26 ನೇ ಸಾಲಿನ ಲಾಭ-ನಷ್ಟದ ತ:ಖ್ತೆ

(ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949ರ ಕಲಂ 31 ಫಾರಂ ಬಿ 3ನೇ ಷೆಡ್ಯೂಲ್ ಪ್ರಕಾರ)

| ಆದಾಯದ ವಿವರ | ದಿನಾಂಕ : 31.03.2026ಕ್ಕೆ ಇದ್ದಂತೆ ರೂ. ಪೈ | ದಿನಾಂಕ : 31.03.2025ಕ್ಕೆ ಇದ್ದಂತೆ ರೂ. ಪೈ |
|---|---|---|
| ಅ) ಸಾಲ ಮತ್ತು ಮುಂಗಡಗಳ ಮೇಲೆ ಬಡ್ಡಿ ಬಂದಿರುವುದು | 47,57,56,431.29 | 45,24,78,304.33 |
| ಆ) ಹೂಡಿಕೆಗಳ ಮೇಲೆ ಬಡ್ಡಿ | 24,87,66,579.41 | 24,00,98,746.47 |
| ಇ) ಕಮಿಷನ್, ವಿನಿಮಯ ಮತ್ತು ದಲ್ಲಾಳಿ ಬಾಬ್ತು | 1,70,60,445.31 | 1,51,97,015.35 |
| ಈ) ಇತರೆ ಆದಾಯ | 1,63,20,895.03 | 1,83,86,534.88 |
| **ಒಟ್ಟು** | **75,79,04,351.04** | **72,61,60,601.03** |
| **ಖರ್ಚಿನ ವಿವರ** | | |
| ಅ) ಠೇವಣಿಗಳ ಮೇಲೆ ಬಡ್ಡಿ ಪಾವತಿಸಿರುವುದು | 45,24,62,806.00 | 40,02,36,715.06 |
| ಆ) ಸರ್ಕಾರಿ ಭದ್ರತೆಗಳ ಮೇಲಿನ ಅಪೂರ್ಣ ಅವಧಿಯ ಬಡ್ಡಿ | 2,02,11,936.56 | 2,47,65,702.78 |
| ಇ) ಸಿಬ್ಬಂದಿ ಸಂಬಳ ಮತ್ತು ಇತರೆ ಭತ್ಯೆಗಳು | 15,35,25,028.00 | 14,73,68,621.00 |
| ಈ) ನಿರ್ದೇಶಕರ ಸಿಟ್ಟಿಂಗ್ ಫೀ ಮತ್ತು ಭತ್ಯೆ | 20,96,705.00 | 18,44,136.00 |
| ಉ) ಬಾಡಿಗೆ, ತೆರಿಗೆ, ವಿಮೆ, ವಿದ್ಯುತ್ ಹಾಗೂ ಇತರೆ | 1,86,84,199.24 | 1,81,57,098.04 |
| ಊ) ಕಾನೂನು ವೆಚ್ಚ ವಸೂಲಾತಿ ವೆಚ್ಚ ಹಾಗೂ ವೃತ್ತಿ ಶುಲ್ಕ | 10,92,575.50 | 13,85,169.50 |
| ಋ) ಅಂಚೆ, ಟೆಲಿಗ್ರಾಂ ಮತ್ತು ದೂರವಾಣಿ ವೆಚ್ಚ | 7,14,618.38 | 7,41,079.56 |
| ಎ) ಲೆಕ್ಕಪರಿಶೋಧಕರ ಶುಲ್ಕ | 21,44,410.00 | 18,56,990.00 |
| ಏ) ಸವಕಳಿಗಳು | 51,83,400.00 | 52,46,405.00 |
| ಐ) ಮುದ್ರಣ ದಾಸ್ತಾನು ಮತ್ತು ಜಾಹೀರಾತು ವೆಚ್ಚ | 41,01,083.81 | 29,26,450.68 |
| ಒ) ಕೋರ್ ಬ್ಯಾಂಕಿಂಗ್ ವೆಚ್ಚ | 29,39,593.53 | 29,50,079.07 |
| ಓ) ಇತರೆ ವೆಚ್ಚಗಳು | 1,26,15,357.17 | 1,05,00,866.43 |
| ಔ) ಅವಕಾಶಗಳು / ಅಮೋರ್ಟೈಸೈಶನ್ | 3,17,44,935.00 | 4,42,64,455.00 |
| ಅಂ) ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ ಹಾಗೂ ಇತರೆ | 36,34,889.54 | – |
| **ಒಟ್ಟು** | **71,11,51,537.73** | **66,22,43,768.12** |
| **ನಿವ್ವಳ ಲಾಭ** | **4,67,52,813.31** | **6,39,16,832.91** |
| **ಒಟ್ಟು** | **75,79,04,351.04** | **72,61,60,601.03** |
| ವರ್ಗಾವಣೆ : ಆಪದ್ಧನ ನಿಧಿ | – | 15,25,000.00 |
| ವರ್ಗಾವಣೆ : ಹೂಡಿಕೆಗಳ ಏರಿಳಿತ ನಿಧಿ | 4,96,37,548.00 | 44,86,193.00 |
| **ಒಟ್ಟು** | **4,96,37,548.00** | **60,11,193.00** |
| **ಹಂಚಿಕೆಗಾಗಿ ವಿನಿಯೋಗಿಸಬಹುದಾದ ನಿವ್ವಳ ಲಾಭ** | **4,67,52,813.31** | **6,39,16,832.91** |

# ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560 019.

## ದಿನಾಂಕ : 31-03-2026ಕ್ಕೆ ಇದ್ದಂತೆ ಬ್ಯಾಂಕಿನ ಆಸ್ತಿ-ಜವಾಬ್ದಾರಿ ತ:ಖ್ತೆ

(ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949ರ ಕಲಂ 29 ಫಾರಂ ಎ 3ನೇ ಷೆಡ್ಯೂಲ್ ಪ್ರಕಾರ)

| ಬಂಡವಾಳ ಮತ್ತು ಜವಾಬ್ದಾರಿಗಳು | ದಿನಾಂಕ : 31.03.2026ಕ್ಕೆ ಇದ್ದಂತೆ ರೂ. ಪೈ | ದಿನಾಂಕ : 31.03.2025ಕ್ಕೆ ಇದ್ದಂತೆ ರೂ. ಪೈ |
|---|---|---|
| 1. ಷೇರು ಬಂಡವಾಳ | 17,57,08,100.00 | 16,44,29,650.00 |
| 2. ಆಪದ್ಧನ ಮತ್ತು ಇತರೆ ನಿಧಿಗಳು | 112,94,26,479.36 | 109,38,62,992.45 |
| 3. ಠೇವಣಿ ಮತ್ತು ಇತರೆ ಖಾತೆಗಳು | 704,24,31,471.33 | 624,04,94,883.71 |
| 4. ಸಂದಾಯವಾಗತಕ್ಕ ಬಿಲ್ಲುಗಳು | 92,45,493.00 | – |
| 5. ಸಾಲಗಳ ಮೇಲೆ ಬರಬೇಕಾದ ಬಡ್ಡಿ (ಇದಿರು ದಾಖಲೆ) | 26,28,40,802.08 | 22,36,86,237.38 |
| 6. ಠೇವಣಿಗಳ ಮೇಲೆ ಕೊಡಬೇಕಾದ ಬಡ್ಡಿ | 2,44,42,678.00 | 2,22,93,106.00 |
| **7. ಇತರೆ ಜವಾಬ್ದಾರಿಗಳು** | | |
| ಅ) ಕೊಡಬೇಕಾದ ಲಾಭಾಂಶ | 51,42,843.00 | 42,83,670.00 |
| ಆ) ಇತರೆ ಖಾತೆಗಳು ಮತ್ತು ಜವಾಬ್ದಾರಿಗಳು | 10,54,68,976.70 | 11,50,17,336.55 |
| 8. ನಿವ್ವಳ ಲಾಭ | 4,67,52,813.31 | 6,39,16,832.91 |
| **ಒಟ್ಟು ಜುಮ್ಲಾ** | **880,14,59,656.78** | **792,79,84,709.00** |
| Bank Guarantee | 10,000.00 | 10,000.00 |
| DEAF amount with RBI | 5,74,03,270.00 | 4,89,18,169.00 |
| **ಒಟ್ಟು** | **885,88,72,926.78** | **797,69,12,878.00** |
| **ಆಸ್ತಿ ಮತ್ತು ಸ್ವತ್ತುಗಳು** | **ದಿನಾಂಕ : 31.03.2026ಕ್ಕೆ** | **ದಿನಾಂಕ : 31.03.2025ಕ್ಕೆ** |
| 1. ನಗದು ಶಿಲ್ಕು | 3,14,52,313.00 | 2,45,76,817.00 |
| 2. ಇತರೆ ಬ್ಯಾಂಕುಗಳ ಶಿಲ್ಕು | 31,21,33,967.51 | 32,65,40,074.87 |
| 3. ಬ್ಯಾಂಕಿನ ಹೂಡಿಕೆಗಳು | 346,85,14,573.42 | 325,26,37,004.23 |
| 4. ಸಾಲ ಮತ್ತು ಮುಂಗಡಗಳು | 451,27,51,606.13 | 395,26,98,922.60 |
| **5. ಬರಬೇಕಾದ ಬಡ್ಡಿಗಳು** | | |
| ಅ) ಸಾಲಗಳ ಮೇಲೆ (ಇದಿರು ದಾಖಲೆ) | 26,28,40,802.08 | 22,36,86,237.38 |
| ಆ) ಹೂಡಿಕೆಗಳ ಮೇಲೆ | 4,55,40,987.11 | 3,77,15,799.34 |
| 6. ಸಂದಾಯವಾಗತಕ್ಕ ಬಿಲ್ಲುಗಳು | 92,45,493.00 | – |
| 7. ಸ್ಥಿರಾಸ್ತಿಗಳು (ಸವಕಳಿ ನಂತರ) | 9,76,20,393.00 | 4,79,72,683.00 |
| 8. ಪೀಠೋಪಕರಣ ಮತ್ತು ಇತರೆ ಆಸ್ತಿಗಳು (ಸವಕಳಿ ನಂತರ) | 2,14,75,107.96 | 1,97,26,954.96 |
| 9. ಇತರೆ ಆಸ್ತಿಗಳು | 3,98,84,413.57 | 4,24,30,215.62 |
| **ಒಟ್ಟು ಜುಮ್ಲಾ** | **880,14,59,656.78** | **792,79,84,709.00** |
| Bank Guarantee | 10,000.00 | 10,000.00 |
| DEAF amount with RBI | 5,74,03,270.00 | 4,89,18,169.00 |
| **ಒಟ್ಟು** | **885,88,72,926.78** | **797,69,12,878.00** |

**ಪರವಾಗಿ: ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

| ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|
| **ಶ್ರೀರಾಮ್ ಎಸ್** | **ಎನ್.ಎಲ್.ಚಿದಾನಂದ** | **ಎಂ.ಎನ್. ಕಂಬೇಗೌಡ** | **ಡಾ.ಎಂ.ಆರ್. ವೆಂಕಟೇಶ್** |
| (ಮುಖ್ಯಕಾರ್ಯನಿರ್ವಹಣಾಧಿಕಾರಿ) | (ನಿರ್ದೇಶಕರು) | (ಉಪಾಧ್ಯಕ್ಷರು) | (ಅಧ್ಯಕ್ಷರು) |

ಸಮಾನ ದಿನಾಂಕದ ನಮ್ಮ ವರದಿಗೆ ಒಳಪಟ್ಟು
ಪರವಾಗಿ: **ಮೆ: ಸಿ ಎಸ್ ಎಂ ಆರ್ ಅಂಡ್ ಅಸೋಸಿಯೇಟ್ಸ್**
ಸನ್ನದು ಲೆಕ್ಕಪರಿಶೋಧಕರು
ನೋಂದಣಿ ಸಂಖ್ಯೆ:010106S
ಸಹಿ/-
(CA. **ಮುರಳೀಧರ ಆರ್**) ಪಾಲುದಾರರು
ಸದಸ್ಯತ್ವ ಸಂಖ್ಯೆ :221482
**UDIN-26221482CYJFVH2012**

ದಿನಾಂಕ : 23-06-2026
ಸ್ಥಳ : ಬೆಂಗಳೂರು

# ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು – 560 019.

## ಉಪನಿಬಂಧನೆಗಳ ತಿದ್ದುಪಡಿ

### ಅಧ್ಯಾಯ–15
### ಸಿಬ್ಬಂದಿ ಸಾಲ ಮತ್ತು ಮುಂಗಡಗಳು
### (ಅಧ್ಯಾಯ–11 ಸಿಬ್ಬಂದಿ ವಿಷಯಗಳು)

| ಕ್ರ ಸಂ | ಉಪನಿಯಮ ಸಂಖ್ಯೆ | ಹಾಲಿಯಿರುವ ಉಪನಿಯಮ | ತಿದ್ದುಪಡಿಯಾಗಬೇಕಾಗಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 01 | 15.02<br>15.02.01 | **ಹಬ್ಬದ ಮುಂಗಡ:**<br>ಯುಗಾದಿ, ಗೌರಿ ಗಣೇಶ ಚತುರ್ಥಿ, ದೀಪಾವಳಿ, ರಂಜಾನ್, ಕ್ರಿಸ್‌ಮಸ್ ಈ ಹಬ್ಬಗಳಿಗೆ ಹಬ್ಬದ ಮುಂಗಡ ಮಂಜೂರು ಮಾಡಬಹುದಾಗಿದ್ದು, ಈ ಮೊಬಲಗು ನೌಕರನ ಮೂಲ ವೇತನ ಅಥವಾ ರೂ.5000/–ಗಳು ಇದರಲ್ಲಿ ಯಾವುದು ಕಡಿಮೆಯೋ ಅದು ಕನಿಷ್ಠ ರೂ.500/– ಗಳಿಗೆ ಸಮೀಕರಿಸಿ ಕೊಡಬಹುದು. ಇದಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ಹಾಕತಕ್ಕದ್ದಲ್ಲ. | ಯುಗಾದಿ, ಗೌರಿ ಗಣೇಶ ಚತುರ್ಥಿ, ದೀಪಾವಳಿ, ರಂಜಾನ್, ಕ್ರಿಸ್‌ಮಸ್ ಈ ಹಬ್ಬಗಳಿಗೆ ಹಬ್ಬದ ಮುಂಗಡ ಮಂಜೂರು ಮಾಡಬಹುದಾಗಿದ್ದು, ಈ ಮೊಬಲಗು ನೌಕರನ ಮೂಲವೇತನ ಅಥವಾ ರೂ.10,000/–ಗಳು ಇದರಲ್ಲಿ ಯಾವುದು ಕಡಿಮೆಯೋ ಅದು ಕನಿಷ್ಠ ರೂ.1000/– ಗಳಿಗೆ ಸಮೀಕರಿಸಿ ಕೊಡಬಹುದು. ಇದಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ಹಾಕತಕ್ಕದ್ದಲ್ಲ. | ಹಬ್ಬಕ್ಕೆ ಖರೀದಿಸುವ ವಸ್ತುಗಳ ಬೆಲೆಗಳು ಹೆಚ್ಚಳವಾಗಿರುವುದರಿಂದ ಹಾಗೂ ಕರ್ನಾಟಕ ರಾಜ್ಯ ಸರ್ಕಾರವು ತನ್ನ ನೌಕರರಿಗೆ ಹಬ್ಬದ ಮುಂಗಡ ಹಣವಾಗಿ ಪ್ರಸ್ತುತ ರೂ.25,000/– ನೀಡುತ್ತಿರುವುದರಿಂದ |
| 02 | 15.07.<br>15.07.01 | **ವೇತನ ಆಧಾರಿತ ಸಾಲ:**<br>ಈ ಸಾಲದ ಗರಿಷ್ಠ ಮಿತಿ ರೂ.5,00,000.00 (ರೂ.ಐದು ಲಕ್ಷಗಳು ಮಾತ್ರ) ಅಥವಾ ನೌಕರನ/ಳ ನಿವ್ವಳ ವೇತನದ 15 ಪಟ್ಟು ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡಬಹುದು ಹಾಗೂ ಈ ಸಾಲವನ್ನು 100 (ನೂರು)ಮಾಸಿಕ ಸಮಕಂತುಗಳಲ್ಲಿ ತೀರಿಸಬಹುದಾಗಿದ್ದು ಈ ಮುಂಗಡಕ್ಕೆ ಬಡ್ಡಿಯ ದರವನ್ನು ನಿರ್ದೇಶಕ ಮಂಡಳಿಯವರು ನಿಗದಿಪಡಿಸುವ ದರದಲ್ಲಿ ಹಾಗೂ ಕಾಲ ಕಾಲಕ್ಕೆ ನಿರ್ದೇಶಕ ಮಂಡಳಿಯವರು ಬಡ್ಡಿ ದರವನ್ನು ಬದಲಾಯಿಸುವ ಅಧಿಕಾರ ಹೊಂದಿರುತ್ತಾರೆ. | **ವೇತನ ಆಧಾರಿತ ಸಾಲ:**<br>ಈ ಸಾಲದ ಗರಿಷ್ಠ ಮಿತಿ ರೂ.10,00,000.00 (ರೂ. ಹತ್ತು ಲಕ್ಷಗಳು ಮಾತ್ರ) ಅಥವಾ ನೌಕರನ/ಳ ನಿವ್ವಳ ವೇತನದ 15 ಪಟ್ಟು ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡಬಹುದು ಹಾಗೂ ಈ ಸಾಲವನ್ನು 100 (ನೂರು)ಮಾಸಿಕ ಸಮಕಂತುಗಳಲ್ಲಿ ಅಥವಾ ಸಿಬ್ಬಂದಿಯ ನಿವೃತ್ತಿ ದಿನಾಂಕಕ್ಕೆ ಒಂದು ವರ್ಷ ಮುಂಚಿತವಾಗಿ ಸಾಲ ಮುಕ್ತಾಯಕ್ಕೆ ಅನ್ವಯವಾಗುವ ಕಂತುಗಳನ್ನು ನಿಗದಿಪಡಿಸಿ ಸಾಲ ತೀರಿಸಬಹುದಾಗಿದ್ದು ಈ ಸಾಲಕ್ಕೆ ಬಡ್ಡಿಯ ದರವನ್ನು ನಿರ್ದೇಶಕ ಮಂಡಳಿಯವರು ನಿಗಧಿಪಡಿಸುವ ದರದಲ್ಲಿ ಹಾಗೂ ಕಾಲ ಕಾಲಕ್ಕೆ ನಿರ್ದೇಶಕ ಮಂಡಳಿಯವರು ಬಡ್ಡಿ ದರವನ್ನು ಬದಲಾಯಿಸುವ ಅಧಿಕಾರ ಹೊಂದಿರುತ್ತಾರೆ. | ಬ್ಯಾಂಕಿನಲ್ಲಿ ಸಿಬ್ಬಂದಿಗಳು ಹೆಚ್ಚು ಸಾಲ ಸೌಲಭ್ಯವನ್ನು ಪಡೆಯುವ ಉದ್ದೇಶದಿಂದ |
| 03 | 15.08<br>15.08.01 | **ಚಿನ್ನಾಭರಣ ಸಾಲ:**<br>ಈ ಸಾಲದ ಗರಿಷ್ಠ ಮಿತಿಯು ರೂ.2,00,000/– ಗಳಾಗಿರುತ್ತದೆ. | **ಚಿನ್ನಾಭರಣ ಸಾಲ:**<br>ಈ ಸಾಲದ ಗರಿಷ್ಠ ಮಿತಿಯು ರೂ.10,00,000/– ಗಳಾಗಿರುತ್ತದೆ. | ಬ್ಯಾಂಕಿನಲ್ಲಿ ಸಿಬ್ಬಂದಿಗಳು ಹೆಚ್ಚು ಸಾಲ ಸೌಲಭ್ಯವನ್ನು ಪಡೆಯುವ ಉದ್ದೇಶದಿಂದ |

# ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560019

## 2025-26ನೇ ಸಾಲಿನ ಬ್ಯಾಂಕಿನ 61ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾಪತ್ರದ ವಿಷಯಗಳ ಮೇಲಿನ ಟಿಪ್ಪಣಿಗಳು

**ವಿಷಯ 1 :**

61ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದೇವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಗುವುದು.

**ವಿಷಯ 2 :**

ಬ್ಯಾಂಕಿನ ನಿರ್ದೇಶಕ ಮಂಡಳಿ ಸದಸ್ಯರು ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸುವರು.

**ವಿಷಯ 3 :**

ದಿನಾಂಕ:09-08-2026 ರಂದು ನಡೆಯಲಿರುವ 61ನೇ ವಾರ್ಷಿಕ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡಲು ಸರ್ವಸದಸ್ಯರ ಸಭೆಯ ಮುಂದೆ ಮಂಡಿಸಲಾಗಿದೆ.

**ವಿಷಯ 4 :**

ವರದಿ ಸಾಲಿನಲ್ಲಿ ದೈವಾಧೀನರಾಗಿರುವ ಸದಸ್ಯರುಗಳ ಮಾಹಿತಿಯನ್ನು ವಾರ್ಷಿಕ ವರದಿಯಲ್ಲಿರುವಂತೆ ಸಭೆಯಲ್ಲಿ ಮಂಡಿಸಿ, ಅವರ ಕುಟುಂಬಕ್ಕೆ ಸಂತಾಪ ಸೂಚಿಸಲು ಹಾಗೂ ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಣೆ ಕೋರುವುದು.

**ವಿಷಯ 5 :**

ಬ್ಯಾಂಕಿನ ಅಧ್ಯಕ್ಷರು ಪ್ರಾಸ್ತಾವಿಕ ನುಡಿಯನ್ನು ನಡೆಸಿಕೊಡುವರು.

**ವಿಷಯ 6 :**

2024-25ನೇ ಸಾಲಿನ 60ನೇ ಸರ್ವಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.

**ವಿಷಯ 7 :**

2025-26ನೇ ಸಾಲಿನಲ್ಲಿ ನಡೆದ ಕಾರ್ಯಚಟುವಟಿಕೆಗಳು,ಆರ್ಥಿಕ ಅಂಕಿ-ಅಂಶಗಳು ಮತ್ತು 2026-27ನೇ ಸಾಲಿನ ಕಾರ್ಯಯೋಜನೆಗಳನ್ನೊಳಗೊಂಡ ಮಾಹಿತಿಯನ್ನು ವಾರ್ಷಿಕ ವರದಿಯಲ್ಲಿ ನೀಡಲಾಗಿದ್ದು, ವಾರ್ಷಿಕ ಸರ್ವಸದಸ್ಯರ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

**ವಿಷಯ 8:**

ಚಾರ್ಟೆಡ್ ಅಕೌಂಟೆಂಟ್‌ರಾದ ಮೆ: ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್‌ರವರು 2025-26ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದು, ಸೂಚನಾಪತ್ರದ ಪುಟ ಸಂಖ್ಯೆ. 6 ಮತ್ತು 7ರಲ್ಲಿ ಲಾಭ ನಷ್ಟದ ತ:ಖ್ತೆ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಸರ್ವಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಿದೆ.

**ವಿಷಯ 9:**

2025-26ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ವಾರ್ಷಿಕ ವರದಿಯಲ್ಲಿ ನೀಡಲಾಗಿದ್ದು, ವಾರ್ಷಿಕ ಸರ್ವಸದಸ್ಯರ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

**ವಿಷಯ 10:**

2025–26ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಖರ್ಚಾಗಿರುವುದು, 2026–27ನೇ ಸಾಲಿನ ವಾರ್ಷಿಕ ಆಯವ್ಯಯವನ್ನು ಮತ್ತು 2027–28ನೇ ಸಾಲಿನ ಅಂದಾಜು ಆಯವ್ಯಯ (ತಾತ್ಕಾಲಿಕ) ಮಾಹಿತಿಯನ್ನು ವಾರ್ಷಿಕ ವರದಿಯಲ್ಲಿ ನೀಡಲಾಗಿದೆ.

**ವಿಷಯ 11:**

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ, ಚಾರ್ಟೆಡ್ ಅಕೌಂಟೆಂಟ್‌ರಾದ ಮೆ:ಸಿ ಎಸ್ ಎಂ ಆರ್ & ಅಸೋಸಿಯೇಟ್ಸ್‌ರವರನ್ನು 2026–27ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆ ಮರು ನೇಮಕಾತಿಗಾಗಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿಗಾಗಿ ಪ್ರಸ್ತಾವನೆಯನ್ನು ಕಳುಹಿಸಲಾಗಿರುತ್ತದೆ.

**ವಿಷಯ 12:**

ಬ್ಯಾಂಕಿನ ಉಪನಿಯಮದ ಪ್ರಕಾರ ಮೀಸಲು ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ಮಾಹಿತಿಯನ್ನು ವಾರ್ಷಿಕ ವರದಿಯಲ್ಲಿ ನೀಡಲಾಗಿದೆ.

**ವಿಷಯ 13:**

2025–26ನೇ ಸಾಲಿನಲ್ಲಿ ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಹಾಗೂ ತೆಗೆದು ಹಾಕಿದ ಸದಸ್ಯರ ಪಟ್ಟಿಯ ವಿವರಗಳನ್ನು ವಾರ್ಷಿಕ ವರದಿಯಲ್ಲಿ ನೀಡಲಾಗಿದೆ.

**ವಿಷಯ 14:**

ಬ್ಯಾಂಕಿನ ಉಪನಿಯಮ ಸಂಖ್ಯೆ 20.1ರಲ್ಲಿ ತಿಳಿಸಿರುವಂತೆ ಪ್ರತಿ ಸದಸ್ಯರು ಬಳಸಿಕೊಳ್ಳಬೇಕಾದ ಸೇವೆಯ ಬಳಕೆಯ ಬಗ್ಗೆ ಪೂರ್ಣ ಮಾಹಿತಿಯನ್ನು ವಾರ್ಷಿಕ ವರದಿಯಲ್ಲಿ ನೀಡಲಾಗಿದೆ.

**ವಿಷಯ 15:**

ಬ್ಯಾಂಕಿನ ಉಪನಿಬಂಧನೆಗಳಿಗೆ (ಬೈಲಾ) ತಂದಿರುವ ತಿದ್ದುಪಡಿಯನ್ನು ಸೂಚನಾಪತ್ರದ ಪುಟ ಸಂಖ್ಯೆ.8 ರಲ್ಲಿ ನೀಡಲಾಗಿದೆ.

# ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560 019.

## 62 ವರ್ಷಗಳ ಸುದೀರ್ಘ ವಿಶ್ವಾಸಾರ್ಹ ಗ್ರಾಹಕ ಸೇವೆ

- ಆಡಳಿತ ಕಛೇರಿ ಮತ್ತು 14 ಶಾಖೆಗಳು ಸಂಪೂರ್ಣ ಗಣಕೀಕೃತ ಕಾರ್ಯನಿರ್ವಹಣೆ.
- ಸುಮಾರು ರೂ.6016.14 ಕೋಟಿಗೂ ಮೀರಿದ ವ್ಯವಹಾರ.
- ಸ್ವಂತ ಬಂಡವಾಳ ರೂ.130.51 ಕೋಟಿ.
- ಬ್ಯಾಂಕಿನ ಒಟ್ಟು ಎನ್‌ಪಿಎ ಶೇ.3.18 ನಿವ್ವಳ ಎನ್‌ಪಿಎ ಶೂನ್ಯ.
- ಲೆಕ್ಕಪರಿಶೋಧನಾ ವರ್ಗೀಕರಣ : "A".
- ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಣೆ.
- ATM ಮತ್ತು RUPAY Debit Card ಸೌಲಭ್ಯ.
- ವ್ಯಕ್ತಿಗತ ಚೆಕ್ ಪುಸ್ತಕ (Personalised) ಸೌಲಭ್ಯ.
- ವ್ಯಾಪಾರಸ್ಥರಿಗೆ POS ಯಂತ್ರಗಳ ಸೌಲಭ್ಯ.
- ಗ್ರಾಹಕರುಗಳಿಗೆ SMS ಸೌಲಭ್ಯ.
- ಅತ್ಯಾಕರ್ಷಕ ದರಗಳಲ್ಲಿ ಲಾಕರ್ ಸೌಲಭ್ಯಗಳು.
- NEFT/RTGS ಸೌಲಭ್ಯ.
- MOBILE/INTERNET BANKING/IMPS & UPI ಸೌಲಭ್ಯ.
- ವಿದ್ಯಾರ್ಥಿಗಳಲ್ಲಿ ಉಳಿತಾಯ ಮನೋಭಾವನೆ ಹೆಚ್ಚಿಸುವ ಬಾಲವಿಕಾಸ, ವಿದ್ಯಾರ್ಥಿ ಖಾತೆ ಯೋಜನೆಗಳು.
- ಹೆಣ್ಣುಮಕ್ಕಳ ಶ್ರೇಯೋಭಿವೃದ್ಧಿಗಾಗಿ ಅಧಿಕ ಬಡ್ಡಿ ದರದೊಂದಿಗೆ "ಐಸಿರಿ ಸಮೃದ್ಧಿ ಉಳಿತಾಯ ಖಾತೆ ಯೋಜನೆ.
- ನಿತ್ಯಪಾವತಿ ಜಾಮೀನು ಸಾಲ/ಗುಂಪು ಸಾಲ/ಅಬಕಾರಿ ಸನ್ನದುದಾರರಿಗೆ ನೋಂದಣಿ ನವೀಕರಣ ಸಾಲ/ಗೃಹಲಕ್ಷ್ಮಿ ಸಾಲ ಇತ್ಯಾದಿ ಹೊಸ ರೀತಿಯ ಸಾಲದ ಸೌಲಭ್ಯಗಳು.
- ಮಹಿಳೆಯರ ಉಳಿತಾಯ ಖಾತೆಗೆ ಶೇ ೦.೫೦ರಷ್ಟು ಹೆಚ್ಚು ಬಡ್ಡಿದರ.
- ಅತೀ ಕಡಿಮೆ ಬಡ್ಡಿ ದರದಲ್ಲಿ ಗರಿಷ್ಠ ರೂ.1 ಕೋಟಿ ವಿದ್ಯಾಭ್ಯಾಸ ಸಾಲ ಸೌಲಭ್ಯ.
- ಚಿನ್ನಾಭರಣ ಸಾಲ ಪ್ರತಿ ಗ್ರಾಂಗೆ ರೂ.೨೦೦೦/-
- ವಿವಿದ ವಾಹನ ಸಾಲ ಸೌಲಭ್ಯಗಳು.
- ಮಹಿಳೆಯರ ಸಬಲೀಕರಣಕ್ಕಾಗಿ ವಿಶೇಷ ಸಾಲ ಸೌಲಭ್ಯಗಳು. (ಗುಡಿ ಕೈಗಾರಿಕೆಗಳು, ಮಹಿಳಾ ಗುಂಪು ಸಾಲ, ಮಹಿಳಾ ಉದ್ದಿಮೆದಾರರ ಸಾಲ ಯೋಜನೆಗಳು)
- ಆಕರ್ಷಕ ಬಡ್ಡಿ ದರದಲ್ಲಿ ಗೃಹ ಸಾಲ ಮತ್ತು ಅಡಮಾನ ಸಾಲ ಸೌಲಭ್ಯ.

## ಠೇವಣಿಗಳ ಮೇಲಿನ ಬಡ್ಡಿದರ

| ಅವಧಿ | ಬಡ್ಡಿದರ | ಹಿರಿಯ ನಾಗರೀಕರಿಗೆ |
|---|---|---|
| 30 ದಿನಗಳಿಂದ – 90 ದಿನಗಳವರೆಗೆ | 4.50 | 4.50 |
| 91 ದಿನಗಳಿಂದ – 180 ದಿನಗಳವರೆಗೆ | 5.25 | 5.25 |
| 181 ದಿನಗಳಿಂದ – 1 ವರ್ಷದವರೆಗೆ | 6.25% | 6.25% |
| 1 ವರ್ಷ ಮೇಲ್ಪಟ್ಟು – 2 ವರ್ಷಗಳವರೆಗೆ | 6.75% | 7.25% |
| 2 ವರ್ಷ ಮೇಲ್ಪಟ್ಟು – 3 ವರ್ಷಗಳವರೆಗೆ | 7.00% | 7.50% |
| 3 ವರ್ಷ ಮೇಲ್ಪಟ್ಟು | 7.25% | 7.75% |

**ಒಂದೇ ಗಂಟಿನಲ್ಲಿ ರೂ. 15.00 ಲಕ್ಷ ಹಾಗೂ ಮೇಲ್ಪಟ್ಟ ಠೇವಣಿಗಳಿಗೆ 1 ವರ್ಷ ಮೇಲ್ಪಟ್ಟ ಅವಧಿಗೆ ಶೇ.0.25ರಷ್ಟು ಹೆಚ್ಚುವರಿಯಾಗಿ ಬಡ್ಡಿಯನ್ನು ನೀಡಲಾಗುವುದು.**

## ಆಡಳಿತ ಕಛೇರಿ ಮತ್ತು 14 ಶಾಖೆಗಳು:

| | | |
|---|---|---|
| **01** **ಆಡಳಿತ ಕಛೇರಿ**<br>ನಂ. 5, 9ನೇ ಅಡ್ಡರಸ್ತೆ,<br>ಎನ್.ಆರ್. ಕಾಲೋನಿ,<br>ಬೆಂಗಳೂರು – 560 019.<br>ದೂ. : 080–22958156/57<br>ಮೊ: 9606922119 | **06** **ಬನಶಂಕರಿ 2ನೇ ಹಂತದ ಶಾಖೆ**<br>ನಂ. 3035, 14ನೇ ಅಡ್ಡರಸ್ತೆ,<br>6ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ,<br>ಬೆಂಗಳೂರು 560 070.<br>ದೂ.: 080–22958164/65<br>ಮೊ:9606922125 | **11** **ತಾವರೆಕೆರೆ ಶಾಖೆ**<br>ನಂ.1&2, ಪಂಚಮುಖಿ ಗಣಪತಿ<br>ದೇವಸ್ಥಾನದ ಎದುರು,<br>ತಾವರೆಕೆರೆ, ಮಾಗಡಿರಸ್ತೆ,<br>ಬೆಂಗಳೂರು–562 130.<br>ದೂ. :080–29554428 ಮೊ:9606922130 |
| **02** **ಪ್ರಧಾನ ಕಛೇರಿ ಶಾಖೆ**<br>ನಂ.14/1, 1ನೇ ಮುಖ್ಯರಸ್ತೆ,<br>ಎನ್.ಆರ್.ಕಾಲೋನಿ, ಬಸವನಗುಡಿ,<br>ಬೆಂಗಳೂರು–560 004<br>ದೂ. : 080–22958150/51<br>ಮೊ:9606922121 | **07** **ಮೈಸೂರ್‌ರೋಡ್ ಶಾಖೆ**<br>ನಂ.293, ಆರ್.ಕೆ ಬಿಲ್ಡಿಂಗ್, ಬ್ಯಾಟರಾಯನಪುರ,<br>ಆಮ್ಕೋ ಬ್ಯಾಟರಿ ಎದುರು, ಮೈಸೂರು ರಸ್ತೆ,<br>ಬೆಂಗಳೂರು–560 026<br>ದೂ.:080–22958166/67, ಮೊ:9606922126 | **12** **ಬೇಗೂರು ಶಾಖೆ**<br>ನಂ.93, ಹೊಂಗಸಂದ್ರ,<br>ಬೇಗೂರು ಮುಖ್ಯರಸ್ತೆ,<br>ಬೆಂಗಳೂರು–560 068<br>ದೂ.:080–25733788<br>ಮೊ:9606922131 |
| **03** **ಬನಶಂಕರಿ 3ನೇ ಹಂತದ ಶಾಖೆ**<br>ನಂ.40, ಕತ್ತರಿಗುಪ್ಪೆ ಮುಖ್ಯರಸ್ತೆ,<br>ಬನಶಂಕರಿ, 3ನೇ ಹಂತ,<br>ಬೆಂಗಳೂರು – 560 085<br>ದೂ. : 080–22958158/59<br>ಮೊ:9606922122 | **08** **ಕಾಮಾಕ್ಷಿಪಾಳ್ಯ ಶಾಖೆ**<br>ನಂ.61/1, ಸಾಣೆಗೊರವನಹಳ್ಳಿ, ಯಶವಂತಪುರ<br>ಹೋಬಳಿ, ಮಾಗಡಿ ಮುಖ್ಯರಸ್ತೆ, ಕಾಮಾಕ್ಷಿಪಾಳ್ಯ,<br>ಬೆಂಗಳೂರು–560 079<br>ದೂ. :080–22958168/69, ಮೊ:9606922127 | **13** **ಬನ್ನೇರುಘಟ್ಟ ಶಾಖೆ**<br>49/118, ಜಂಬೂಸವಾರಿದಿಣ್ಣೆ<br>ಮುಖ್ಯ ರಸ್ತೆ, ಸುರಭಿನಗರ<br>ಜೆ.ಪಿ ನಗರ 8ನೇ ಹಂತ, ಬೆಂಗಳೂರು–78<br>ದೂ.:080–41539304, ಮೊ:9606922132 |
| **04** **ಜೆ.ಪಿ.ನಗರ 1ನೇ ಹಂತದ ಶಾಖೆ**<br>ನಂ1400, 4ನೇ ಮುಖ್ಯರಸ್ತೆ,<br>ಕನಕಪುರ ಮುಖ್ಯರಸ್ತೆ, ಜೆ.ಪಿ.ನಗರ<br>1ನೇ ಹಂತ, ಬೆಂಗಳೂರು–560 078<br>ದೂ. : 080–22958160/61<br>ಮೊ:9606922123 | **09** **ಉತ್ತರಹಳ್ಳಿ ಶಾಖೆ**<br>ನಂ.2,3,4 ಎಸ್.ಕೆ ಕಾಂಪ್ಲೆಕ್ಸ್, ಚನ್ನಸಂದ್ರ,<br>ಕೆಂಗೇರಿ ಮುಖ್ಯರಸ್ತೆ,<br>ಉತ್ತರಹಳ್ಳಿ ಹೋಬಳಿ, ಬೆಂಗಳೂರು–560 061<br>ದೂ.: 080–22958170/71, ಮೊ:9606922128 | **14** **ನಾಗದೇವನಹಳ್ಳಿ ಶಾಖೆ**<br>ನಂ.684, 2ನೇ ಅಡ್ಡರಸ್ತೆ, ದೊಡ್ಡಬಸ್ತಿ<br>ಮುಖ್ಯರಸ್ತೆ, ಕಲ್ಯಾಣನಗರ, ನಾಗದೇವನಹಳ್ಳಿ,<br>1ನೇ ಮಹಡಿ, ಬೆಂಗಳೂರು–560 056<br>ದೂ.: 080–29912640, ಮೊ:6366936723 |
| **05** **ಬನಶಂಕರಿ 1ನೇ ಹಂತದ ಶಾಖೆ**<br>ನಂ.23, 22ನೇ ಮುಖ್ಯರಸ್ತೆ,<br>ಪಿ.ಇ.ಎಸ್ ಕಾಲೇಜ್ ರಸ್ತೆ,<br>ನಾಗೇಂದ್ರಬ್ಲಾಕ್, ಹನುಮಂತನಗರ,<br>ಬೆಂಗಳೂರು – 560 050.<br>ದೂ. : 080–22958162/63<br>ಮೊ:9606922124 | **10** **ಹೆಸರಘಟ್ಟ ಶಾಖೆ**<br>ನಂ.22, 10ನೇ ಅಡ್ಡರಸ್ತೆ, ಕಲ್ಯಾಣ ನಗರ,<br>ಫೈಪ್ ಲೈನ್ ಮುಖ್ಯರಸ್ತೆ, ಮಲ್ಲಸಂದ್ರ,<br>ಬೆಂಗಳೂರು–560 057<br>ದೂ.: 080–22958172/73<br>ಮೊ:9606922129 | **15** **ಪೀಣ್ಯ 2ನೇ ಹಂತದ ಶಾಖೆ**<br>ನಂ.9820 (ಹೊಸ ನಂ.10),<br>ತಿಗಳರಪಾಳ್ಯ ಮುಖ್ಯರಸ್ತೆ,<br>ಕರಿಹೋಬನಹಳ್ಳಿ, ಪೀಣ್ಯ 2ನೇ ಹಂತ<br>ಬೆಂಗಳೂರು – 560 058.<br>ದೂ.:080–23239901, ಮೊ: 6366936724 |

**ಮುದ್ರಿತ ವಿಷಯ**
**ಅಂಚೆ ಪರವಾನಿಗೆ ಪಡೆದಿದೆ**

**ತೆರೆದ ಅಂಚೆ**

Permitted to post on pre-payment of postage in cash at Business Post Centre, Basavanagudi, Bengaluru - 560 004. under Postmaster General, Bengaluru HQ Region, Bengaluru Licence No. ..................................................................
Rs. 4/- (Rupees Four Only)

**ಗೆ,**

**ಶ್ರೀಮತಿ / ಶ್ರೀ**..............................................................................

..............................................................................

..............................................................................

**ಇವರಿಂದ :**

**ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್**
**ಆಡಳಿತ ಕಛೇರಿ : ನಂ.5, 9ನೇ ಅಡ್ಡರಸ್ತೆ,**
**ಎನ್.ಆರ್. ಕಾಲೋನಿ, ಬೆಂಗಳೂರು–560 019**
**ದೂರವಾಣಿ : 080–22958156/57**
**ಇ–ಮೇಲ್ : admin.ao@stc.bank.in**
**ವೆಬ್‌ಸೈಟ್ : www.stc.bank.in**